IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಗರುಡ ಸದಾಶಿವರಾಯರ ನಾಟಕಗಳಲ್ಲಿ ಸಮಾಜೋ-ಧಾರ್ಮಿಕ ಸುಧಾರಣಾವಾದಿ ಚಳುವಳಿಯ ನೆಲೆಗಳು

**ಡಾ. ಮಲ್ಲಯ್ಯ ಸಂಡೂರು**

ಅಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಸ್ನಾತಕೋತ್ತರ ಕೇಂದ್ರ, ಜ್ಞಾನ ಸರೋವರ, ನಂದಿಹಳ್ಳಿ- ೫೮೩ ೧೧೯

ಮೊ. ೯೪೮೧೦ ೪೬೯೩೪

ಗರುಡ ಸದಾಶಿವರಾಯರು (೧೮೮೨-೧೯೫೪) ವೃತ್ತಿರಂಗದ ನಾಟಕಕಾರರಲ್ಲಿ ಒಬ್ಬರು. ಗರುಡರು ನಾಟಕಕಾರರಾಗಿ, ನಟರಾಗಿ ಕಂಪನಿಯ ಮಾಲೀಕರಾಗಿ ಭಿನ್ನ ಪ್ರಯೋಗಶೀಲತೆಯನ್ನು ಮೆರೆದ ಪ್ರತಿಭಾವಂತರು. ಅವರು ಕನ್ನಡ ರಂಗಭೂಮಿಯನ್ನು ಅದರ ಸಂತೃಪ್ತಿ ಮತ್ತು ಸಂಕ್ರಮಣಗಳ ಸಂಧಿಕಾಲದಲ್ಲಿ ಪ್ರವೇಶ ಮಾಡಿದವರು. ಅತಿಯಾದ ಬ್ರಿಟಿಷರ ದಬ್ಬಾಳಿಕೆ, ಭಾರತೀಯರೆಲ್ಲ ಒಂದುಗೂಡಿ ದೇಶದಾದ್ಯಂತ ಸ್ವಾತಂತ್ರ್ಯ ಆಂದೋಲನವನ್ನು ನಡೆಸುತ್ತಿದ್ದ ಕಾಲವದು. ಆಗ ಗಾಂಧೀಜಿ, ತಿಲಕ್ ಮೊದಲಾದ ರಾಷ್ಟ್ರ ನೇತಾರರರು ದೇಶವ್ಯಾಪಿ ಚಳವಳಿಗೆ ಕರೆಕೊಟ್ಟಿದ್ದರು. ಇಂತಹ ನೇತಾರರ ಪ್ರಭಾವ ಗರುಡರ ಮೇಲೆ ಆಯಿತು. ಆಗ ರಂಗಭೂಮಿಯ ಅಭಿನಯಕ್ಕೆ ಅಧ್ಯಾತ್ಮದ ನೆಲೆಯನ್ನು ಮುಖಾಮುಖಿಗೊಳಿಸಿ ೫೦ರಷ್ಟು ನಾಟಕಗಳನ್ನು ಅವರು ರಚಿಸಿದರು. ತಮ್ಮ ವೃತ್ತಿರಂಗಭೂಮಿಯ ನಾಟಕಗಳಲ್ಲಿ ಭಾರತೀಯ ಸಂಸ್ಕೃತಿ ಮತ್ತು ರಾಷ್ಟ್ರೀಯತೆಯ ಪ್ರಜ್ಞೆ, ಸಮಾಜಪರ ಮೌಲ್ಯಗಳನ್ನು ಅಭಿವ್ಯಕ್ತಿಸಿದರು. ವೃತ್ತಿರಂಗಭೂಮಿಯ ನಾಟಕಗಳಿಗೆ ಸಾಹಿತ್ಯಕ ಮೌಲ್ಯ ಹೆಚ್ಚಿಸಿದರು. ಹೀಗಾಗಿ ಅವರು ಪೌರಾಣಿಕ, ಐತಿಹಾಸಿಕ, ಭಕ್ತಿಪ್ರಧಾನ ಹಾಗೂ ಸಾಮಾಜಿಕ ನಾಟಕಗಳನ್ನು ಸ್ವಾತಂತ್ರ್ಯ ಪೂರ್ವ ಹಾಗೂ

ಸ್ವಾತಂತ್ರ್ಯ ನಂತರದಲ್ಲಿ ರಚಿಸಿದ್ದಾರೆ. ಕನ್ನಡ ವೃತ್ತಿರಂಗದ ನಾಟಕಗಳಲ್ಲಿ ಪ್ರಧಾನವಾಗಿ ಸುಧಾರಣಾವಾದಿ ಚಳುವಳಿಯನ್ನು ಹರಿಬಿಟ್ಟವರಲ್ಲಿ ಗರುಡ ಸದಾಶಿವರಾಯರು ಮುಖ್ಯರು. ಅವರ ಪ್ರಮುಖ ಸಾಮಾಜಿಕ ನಾಟಕಗಳಾದ 'ಸತ್ಯಸಂಕಲ್ಪ, 'ನಮ್ಮ ಭಾಗ್ಯೋದಯ'ಮತ್ತು 'ಕ್ರಾಂತಿ'ನಾಟಕಗಳಲ್ಲಿ ಸಮಾಜೋ-ಧಾರ್ಮಿಕ ಸುಧಾರಣಾವಾದಿ ಚಳುವಳಿಯ ನೆಲೆಗಳನ್ನು ಇಲ್ಲಿ ಚರ್ಚಿಲಾಗಿದೆ.

ಸತ್ಯ ಸಂಕಲ್ಪ'ನಾಟಕದಲ್ಲಿ ಬಾಲ್ಯವಿಧವೆಯಾದ ಶಾರದ ಕೇಶ ಮುಂಡನ ಮಾಡಿಸಿಕೊಳ್ಳದೆ ಊರಿನ ಶ್ರೀಮಂತ ಮಾಧವರಾಯರನ್ನು ಪುನರ್ವಿವಾಹವಾಗಿ ಸಮಾಜದ ಬಹಿಷ್ಕಾರಕ್ಕೆ ಒಳಗಾಗುತ್ತಾಳೆ. ಗರ್ಭಿಣಿಯಾಗಿದ್ದ ಆಕೆ ಮಾಧವರಾಯನಿಂದಲೂ ತಿರಸ್ಕೃತಳಾಗಿ ಗಾಂಧೀಜಿಯವರ ಆಶ್ರಮಕ್ಕೆ ಸೇರುತ್ತಾಳೆ. ಶಾರದೆ ತಂದೆ ತಾಯಿಗಳು ಕಾಶೀಯಾತ್ರೆಯಿಂದ ಹಿಂದಿರುಗುವಾಗ ಗಾಂಧೀಜಿಯವರ ಆಶ್ರಮಕ್ಕೆ ಭೇಟಿಕೊಡುವರು. ಅಲ್ಲಿದ್ದ ಶಾರದೆ ಮತ್ತು ಅವಳ ಮಗ ಕುಮಾರನನ್ನು ಕರೆದುಕೊಂಡು ಬಂದು ಮನೆಯಲ್ಲಿಟ್ಟುಕೊಳ್ಳುವರು. ಕುಷ್ಠರೋಗದಿಂದ ಬಳಲುತ್ತಿದ್ದ ಮಾಧವರಾಯನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಶಾರದೆ ಅವನಿಗೆ ಶೂಶ್ರುಷೆ ಮಾಡಿ ಗುಣಮುಖನನ್ನಾಗಿ ಮಾಡುವಳು. ಶಾರದೆಯು ಬೀದಿಯನ್ನು ಸ್ವಚ್ಛಗೊಳಿಸುವ ಮೂಲಕ ದೇಶ ಸೇವೆಯಲ್ಲಿ ತೊಡಗುವಳು. ಈ ನಾಟಕದಲ್ಲಿ ಪದ್ಮನಾಭನು ವಿನಯಶೀಲ ತರುವಣ ಚರಖಾಲಯವನ್ನು ಪ್ರಾರಂಭಿಸಿ ತನ್ನ ರಾಷ್ಟ್ರ ಪ್ರೇಮವನ್ನು ಪ್ರಕಟಿಸುತ್ತಾನೆ. ಲೇಖಕರು ಇದರಲ್ಲಿ ಹಳತು-ಹೊಸತುಗಳನ್ನು ಸಂಘರ್ಷಿಸಿದ್ದನ್ನು ಆಧುನಿಕ ಮೌಲ್ಯಗಳನ್ನು ಪುರಸ್ಕರಿಸಿದ್ದನ್ನು ಕಾಣುತ್ತೇವೆ. ಗರುಡರ 'ಸತ್ಯಸಂಕಲ್ಪ'ನಾಟಕವನ್ನು ಒಮ್ಮೆ ವೀಕ್ಷಿಸಿದ್ದ ಮಹಾತ್ಮಗಾಂಧಿಯವರು, ಜನರಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚಲು ರಂಗಭೂಮಿ ಉತ್ತಮ ವೇದಿಕೆಯಾಗಿದ್ದು, ಗರುಡ ಸದಾಶಿವರಾಯರು ಈ ನಿಟ್ಟಿನಲ್ಲಿ ಉತ್ತಮ ರೀತಿಯಲ್ಲಿ ತಿಳಿವಳಿಕೆ ನೀಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಗರುಡರ 'ನಮ್ಮ ಭಾಗ್ಯೋದಯ'ನಾಟಕದಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಸಾಮಾಜಿಕ ಭಾವೈಕ್ಯತೆಯನ್ನು ತುಂಬಬೇಕೆನ್ನುವ ಆಶಯವಿದೆ. ಅದರಂತೆ ಅವರು ನಿರೂಪಿಸಿರುವರು. ಅಸ್ಪೃಶ್ಯತಾ ನಿವಾರಣೆ, ವಿಧವಾ ಪುನರ್ವಿವಾಹ ಮೊದಲಾದ ಕಾಲೋಚಿತವಾದ ಸುಧಾರಣೆಗಳು ನಡೆಯಬೇಕೆಂದು ಬಹಿರಂಗವಾಗಿ ಬೋಧಿಸುವ ಕ್ರಾಂತಿಕಾರಿ ಮನೋಭಾವದ ವಕೀಲ ಸಮರ್ಥಯ್ಯ ಜಗದ್ಗುರುಗಳಿಂದ ಬಹಿಷ್ಕಾರಕ್ಕೆ ಒಳಗೊಳ್ಳುತ್ತಾನೆ. ಧರ್ಮಪತ್ನಿ ಭಾಗ್ಯಮ್ಮನಿಂದಲೂ ದೂರವಾಗಿ ಲಂಡನ್ನಿನಲ್ಲಿ ಓದಿದ ಸತ್ಯವತಿಯನ್ನು ವಿವಾಹವಾಗುತ್ತಾನೆ. ಸಮರ್ಥಯ್ಯನ ಮಗ ಚಕ್ರಪಾಣಿ ಹಾಗೂ ಹೆಂಡತಿ ಸತ್ಯವತಿಯರು ವಿದೇಶದಲ್ಲಿ ಶಿಕ್ಷಣ ಪಡೆದವರು. ಅವರು ಗಾಂಧೀಜಿಯವರ ಹರಿಜನೋದ್ಧಾರ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಪ್ರಗತಿಪರ ಧೋರಣೆಯನ್ನು ತೋರಿದವರು. ಹರಿಜನ ಕೇರಿಗೆ ಹೋಗಿ ಅವರೊಂದಿಗೆ ಬೆರೆತು ಅವರನ್ನು ಉದ್ಧರಿಸಲು ಯತ್ನಿಸುತ್ತಾರೆ. ಸಮರ್ಥಯ್ಯನು ಹರಿಜನರಿಗೆ

ದೇವಾಲಯದೊಳಗೆ ಪ್ರವೇಶಿಸಲು ಅನುವು ಮಾಡಿಕೊಡುತ್ತಾನೆ. ಇದೇ ಕಾರ್ಯವನ್ನು ಕೈಗೊಂಡ ಕೆಲವು ಮಠಾಧೀಶರನ್ನು ಅಭಿನಂದಿಸುತ್ತಾನೆ. ಸಮರ್ಥಯ್ಯನು ಗಾಂಧೀಜಿಯವರ ತತ್ವದಂತೆ ಶುದ್ಧ ಸಸ್ಯಹಾರಿಯಾಗಿದ್ದಾನೆ. ಅವನ ದೃಷ್ಟಿಯಲ್ಲಿ ನಿಜವಾದ ವೈದಿಕರು ಮಾಂಸತಿನ್ನಬಾರದೆಂದು ಬೋಧಿಸಿದವರು ಗಾಂಧೀಜಿ, ತಿಲಕರು.

ಮೂಢ-ಮುಗ್ಧ, ಕಟ್ಟಾ ಧಾರ್ಮಿಕ-ಸಾಂಪ್ರದಾಯಿಕ ನಂಬಿಕೆಯ ಭಾಗಮ್ಮಳು ರಮಾನಂದ ಸ್ವಾಮಿಯಲ್ಲಿ ಶ್ರದ್ಧೆ-ಭಕ್ತಿಯನ್ನಿಟ್ಟಿದ್ದಾಳೆ. ಕಪಟ ಸನ್ಯಾಸಿ ರಮಾನಂದನು ಗುರು-ಶಿಷ್ಯ ಸಾಮರಸ್ಯದ ನೆಪದಿಂದ ಭಾಗಮ್ಮಳನ್ನು ಬಲಾತ್ಕರಿಸಲು ಹೋಗುತ್ತಾನೆ. ಇವಳು ಕೂಗಿಕೊಂಡಾಗ ಹರಿಜನ ಫಕೀರಪ್ಪನು ಬಂದು ರಕ್ಷಿಸುವನು. ಇದರಿಂದ ಭಾಗಮ್ಮಳ ಮನಸ್ಸು ಪರಿವರ್ತನೆಯಾಗಿ ನಿಜವಾದ ಸ್ಪೃಶ್ಯ-ಅಸ್ಪೃಶ್ಯ ಯಾರೆಂಬುದು ಅವಳಿಗೆ ತಿಳಿಯುತ್ತದೆ. ಗುಂಡ್ಯಾನು ಭಾಗಮ್ಮಳಿಗೆ 'ನೀವು ಜಳಕಾ ಮಾಡ್ಲಿಲ್ಲಾ' -ಎಂದು ಅಸ್ಪೃಶ್ಯ ಫಕೀರಪ್ಪನು ರಕ್ಷಿಸುವಾಗ ಮುಟ್ಟಿದ್ದಕ್ಕೆ ಛೇಡಿಸುವನು. ಆಗ ಭಾಗಮ್ಮಳು ತನಗೆ ಇಂದು ನಿಜವಾದ ಹೊಲೆಯರು ಯಾರೆಂಬುದು ಗೊತ್ತಾಗಿದೆ. ರಮಾನಂದನಂಥ ಹೊಲೆಯನನ್ನು ಮುಟ್ಟಿದ್ದೇನಾದ್ದರಿಂದ ನಾನು ಸ್ನಾನಮಾಡಲೇಬೇಕೆನ್ನುವನು. ಆಗ ಸಮರ್ಥಯ್ಯನು 'ಇಂಥ ವಿಚಾರ ನಮ್ಮ ಜನಾಂಗದಲ್ಲಿ ಮೂಡಿತೆಂದರೆ ಅದೇ ನಮ್ಮ ಭಾರತ ಭಾಗ್ಯೋದಯವೆನ್ನುವನು. ೧೯೩೬ರಲ್ಲಿ ಪ್ರಕಟಗೊಂಡ ಈ ಚಿಕ್ಕ ನಾಟಕ ಅಸ್ಪೃಶ್ಯತಾ ನಿರ್ಮೂಲನೆಯನ್ನು ಬೋಧಿಸುತ್ತದೆ.

ಗರುಡರ 'ಕ್ರಾಂತಿ'ಯಲ್ಲಿ ಸಾಮಾಜಿಕ ಅನಿಷ್ಟಪದ್ಧತಿಯಾದ ವರದಕ್ಷಿಣೆಯ ನಿರ್ಮೂಲನೆ ಮತ್ತು ದೇಶಸೇವೆಯನ್ನು ನಿರೂಪಿಸಿರುವರು. ಶೂಲಪಾಣಿ ತಂದೆಯ ವರದಕ್ಷಿಣೆಯ ಆಸೆಯ ಕಾರಣವಾಗಿ ಗೌರಿ ಮತ್ತು ಶೂಲಪಾಣಿಯರ ಮದುವೆ ನಿಲ್ಲುತ್ತದೆ. ಗೌರಿಯ ವಿವಾಹ ನಿಶ್ಚಿತಾರ್ಥಕ್ಕೆ ಸಹಿಹಾಕುವ ತನ್ನ ತಂದೆಯನ್ನು ತಡೆಯುತ್ತಾಳೆ. ಬಡವನಾದರೂ ದೈವೀಗುಣದ ವ್ಯಕ್ತಿಯೊಬ್ಬ ತನ್ನ ಮನವೊಲಿಸಿ ಕೈಹಿಡಿಯುವ ತನಕ ಬ್ರಹ್ಮಚಾರಿಯಾಗಿ ಉಳಿದರೂ ಚಿಂತೆಯಿಲ್ಲ. ರಾಷ್ಟ್ರಸೇವೆಯನ್ನು ಮಾಡುವುದಾಗಿ ನಿರ್ಧರಿಸುತ್ತಾಳೆ. ವಿವಾಹದ ವಿಷಯ ಮುರಿದು ಬಿದ್ದರೂ ಶೂಲಪಾಣಿ ಮತ್ತು ಗೌರಿಯರಲ್ಲಿ ಪ್ರೇಮ ಅಂಕುರಿಸಿ ಲಗ್ನವಾಗುವ ಮತ್ತು ಇಬ್ಬರೂ ರಾಷ್ಟ್ರ ಸೇವೆಗೈಯುವ ನಿರ್ಧಾರ ಕೈಗೊಳ್ಳುತ್ತಾರೆ.

ಜಪಾನಿಯರು ಚೀನಾ ಸೈನಿಕ ಶಿಬಿರದ ಮೇಲೆ ಬಾಂಬ್ ದಾಳಿ ಮಾಡಿರುತ್ತಾರೆ. ಇದರಲ್ಲಿಯ ಗಾಯಾಳುಗಳನ್ನು ಶುಶ್ರೂಷೆ ಮಾಡಲು ಗೌರಿ ಮತ್ತು ಶೂಲಪಾಣಿಯರು ಚೈನಾ ಶುಶ್ರೂಷಾ ಪಥಕದೊಂದಿಗೆ ಹೋಗುತ್ತಾರೆ. ಇಲ್ಲಿ ಅವರು ಮೆರೆದ ಸಾಹಸ, ಮಾಡಿದ ಸೇವೆಯಿಂದಾಗಿ ಎಲ್ಲರ ಮೆಚ್ಚುಗೆಗೂ ಪಾತ್ರರಾಗುತ್ತಾರೆ. ರಾಷ್ಟ್ರಪತಿಗಳು ಅವರ ಸಾಹಸ ಸೇವೆಯನ್ನು ಮೆಚ್ಚಿಕೊಂಡು ಸತ್ಕರಿಸಿ ಅವರ ಮದುವೆಯನ್ನು ನೆರವೇರಿಸುತ್ತಾರೆ. ಹೀಗೆ ೧೯೪೧ರಲ್ಲಿ ಪ್ರಕಟವಾದ ಈ ಗರುಡರ ಈ ನಾಟಕದ'ಲ್ಲಿ ವರದಕ್ಷಿಣೆ ನಿರ್ಮೂಲನೆ, ಆ ಕಾಲದಲ್ಲಿ ಜಪಾನೀಯರು ಚೀನಾದ ಮೇಲೆ ದಾಳಿ ಮಾಡಿರುವುದನ್ನು,

ಜಾಗತಿಕ ಯುದ್ಧದ ಹಿನ್ನೆಲೆಯಲ್ಲಿ ಅಂತರಾಷ್ಟ್ರೀಯ ವಿಷಯವನ್ನು ನಿರೂಪಿಸುವುದರೊಂದಿಗೆ ರಾಷ್ಟ್ರೀಯತೆಯಷ್ಟೇ ಅಲ್ಲದೆ ಅಂತರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿದ್ದಾರೆ.

ಗರುಡರ 'ಉಗ್ರಕಲ್ಯಾಣ' ನಾಟಕ ಹಿಂದೂ-ಮುಸ್ಲಿಂ ಭಾವೈಕ್ಯತೆಯನ್ನು ಸಾರುತ್ತದೆ. ಅದರಲ್ಲಿ ಡಾಕಾದ ನವಾಬನಿಗೆ ಇಸ್ಲಾಂ ಧರ್ಮದ ಬಗೆಗೆ ಎಲ್ಲಿಲ್ಲದ ಅಭಿಮಾನವಿರುವುದಾದರೂ ಕಾಫಿರರ ಧರ್ಮಾಚರಣೆಯನ್ನು ಅನುಸರಿಸಬಾರದೆಂಬ ಅಭಿಪ್ರಾಯದವನು. ಮೌಲ್ವಿಯವರು ಇಸ್ಲಾಂ ಧರ್ಮ ಬೆಳೆದು ಬಂದ ಬಗೆಯನ್ನು ವಿವರಿಸುವರು.

ನವಾಬನ ಪುತ್ರಿ ಷಹಜಾದಿ ಹಿಂದೂ ಮತಾಭಿಮಾನಿ ಭಗವದ್ಗೀತೆಯನ್ನು ಓದುವ ಸಂಸ್ಕೃತ ವಿದುಷಿ ಮಹಮ್ಮದೀಯರು ಮಕ್ಕಾಕ್ಕೆ ಹೋಗುವ ಮತ್ತು ಕಾಬಾಗೆ ವಂದಿಸುವ ಔಚಿತ್ಯವನ್ನು ಪ್ರಶ್ನಿಸುವವಳು. ಮೌಲ್ವಿಯ ಮಾನವ ದೇಹ ರಚನೆಯಲ್ಲಿ ಹೇಗೆ ವ್ಯತ್ಯಾಸವಿಲ್ಲವೋ ಅದರಂತೆ ಧರ್ಮಗಳಲ್ಲಿಯೂ ವ್ಯತ್ಯಾಸವಿಲ್ಲವೆಂದು ಧಾರ್ಮಿಕ ಸಾಮರಸ್ಯ ವ್ಯಕ್ತಪಡಿಸುವನು.

ಷಹಜಾದಿ ತನ್ನ ಪ್ರಾಣರಕ್ಷಣೆ ಮಾಡಿದ ಬ್ರಾಹ್ಮಣ ತರುಣ ಕಾಲಿಚರಣನಿಗೆ ತನ್ನನ್ನು ಕೊಟ್ಟು ಮದುವೆ ಮಾಡಿಕೊಡಲು ತಂದೆಗೆ ಕೇಳಕೊಳ್ಳುತ್ತಾಳೆ. ಜವಾಬನು ಮೌಲ್ವಿಗಳನ್ನು ಮತ್ತು ವೈದಿಕ ಬ್ರಾಹ್ಮಣರನ್ನು ಎರಡು ಧರ್ಮದ ಪ್ರಮುಖರನ್ನು ಕೂಡಿಸಿ ವಿಚಾರಿಸುತ್ತಾನೆ. ಎರಡು ಧರ್ಮದ ಪ್ರಮುಖರು ಒಪ್ಪಿಗೆ ಕೊಡುವರು. ಆದರೆ ತರುಣನು ಒಪ್ಪುವುದಿಲ್ಲ. ಕೆಲವು ದಿನಗಳ ನಂತರ ಮನಃಪೂರ್ವಕವಾಗಿ ಮದುವೆ ಮಾಡಿಕೊಳ್ಳುವನು. ಮದುವೆಯಲ್ಲಿ ಷಹಜಾದಿಗೆ ಬ್ರಾಹ್ಮಣರ ವೇಷಭೂಷಣ ತೊಡಿಸುವರು. ಕಾಲಿಚರಣ ಮತ್ತು ಷಹಜಾದಿ ದಂಪತಿಗಳು ಜಗನ್ನಾಥ ಮಂದಿರಕ್ಕೆ ಹೋಗುವರು. ಅಲ್ಲಿ ಸನಾತನಿಗಳು ಅವರನ್ನು ತಡೆದು ಥಳಿಸುವರು. ಇದರಲ್ಲಿ ಷಹಜಾದಿ ಮರಣವನ್ನಪ್ಪುವಳು. ಇದರಿಂದ ವ್ಯಗ್ರನಾದ ಕಾಲಿಚರಣನು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು ಕಾಲಿಪಹಡನಾಗಿ ಡಾಕಾದಿಂದ ಒಡಿಸ್ಸಾದವರೆಗಿನ ಹಿಂದೂಗಳನ್ನು ಕೊಲ್ಲುತ್ತಾನೆ. ಗೌರೀನಾಥ ಶಾಸ್ತ್ರಿಗಳನ್ನು ಬಂಧಿಸಿ ಕೊಲ್ಲಿಸುತ್ತಾನೆ. ಹಿಂದೂ ದೇವಾಲಯಗಳನ್ನು ನಾಶ ಮಾಡುತ್ತಾನೆ. ಕೊನೆಯಲ್ಲಿ ನವಾಬನು ಇದು ಯೋಗ್ಯ ಪ್ರತಿಕ್ರಿಯೆ ಅಲ್ಲವೆಂದು ಅಳಿಯನನ್ನು ತಡೆದು ಶಾಂತಿ ಸಂದೇಶ ನೀಡಿ ಹತ್ಯಾಕಾಂಡವೆಸಗದಂತೆ ತಡೆಯುತ್ತಾನೆ.

ಧರ್ಮ ವಿವೇಚನೆಯೇ ಈ ನಾಟಕದ ಬೆನ್ನೆಲುಬಾಗಿದೆ. ಧರ್ಮ ಸಮನ್ವಯದ ಮಾರ್ಗದಲ್ಲಿ ಸಾಗುವ ನವಾಬ, ಮೌಲ್ವಿ, ಪ್ರಭೋದಾನಂದರು ಸಮಾವೇಶಗೊಂಡು ಜನತೆಯ ಒಳತಿಗಾಗಿ ನಡೆಸಿದ ಹಿಂದೂ-ಮುಸ್ಲಿಂ ಐಕ್ಯತೆಗೆ ನಡೆಸಿದ ಆದರ್ಶ ಸ್ವಜನರಿಗೆ, ಮಾನವ ಧರ್ಮಕ್ಕೆ ದ್ರೋಹ ಬಗೆಯುವ ಗೌರಿನಾಥ ಶಾಸ್ತ್ರಿ ಮೌಲ್ವಿ ಹಾಗೂ ಪ್ರಬೋದಾನಂದರ ಪ್ರಯತ್ನಕ್ಕೆ ಒತ್ತಾಸೆಯಾಗಿದ್ದ ನವಾಬನು ತುಂಬ ಮಾನವೀಯವಾಗಿ ತೋರುತ್ತಾನೆ. ವೈದಿಕ ತರುಣನೊಬ್ಬ ಇಸ್ಲಾಂ ತರುಣಿಯನ್ನು ವಿವಾಹವಾಗಿ ಧರ್ಮಸಮನ್ವಯಕ್ಕೆ ನಾಂದಿಹಾಡಿದಾಗ ಆಗ ಏರ್ಪಟ್ಟ ಘರ್ಷಣೆಯನ್ನು ಈ ನಾಟಕ ಮನೋಜ್ಞವಾಗಿ ಚಿತ್ರಿತವಾಗಿದೆ.

ಹೀಗೆ ಗರುಡರ ನಾಟಕಗಳು ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಸಾಮಾಜಿಕ ಭಾವೈಕ್ಯತೆಯನ್ನು ತುಂಬುವ ಹೊಣೆಗಾರಿಕೆಯನ್ನು ಹೊತ್ತಿವೆ. ಸಾಮಾಜಿಕ ಅನಿಷ್ಟಪದ್ಧತಿಯಾದ ವರದಕ್ಷಿಣೆಯ ನಿರ್ಮೂಲನೆ ಮತ್ತು ದೇಶಸೇವೆಯನ್ನು ನಿರೂಪಿಸುತ್ತವೆ. ಧರ್ಮ ಸಮನ್ವಯದ ಮಾರ್ಗದಲ್ಲಿ ಅವರ ನಾಟಕಗಳು ಪ್ರತಿಬಿಂಬಿತವಾಗಿವೆ.

## ಪರಾಮರ್ಶನ ಗ್ರಂಥಗಳು

೧. ಪ್ರಕಾಶ ಗರುಡ., ೨೦೦೮, ಗರುಡ ಸದಾಶಿವರಾಯರು, ಸಾಹಿತ್ಯ ಅಕಾದೆಮಿ, ನವದೆಹಲಿ.

೨. ಬಸವರಾಜ ಜಗಜಂಪಿ., ೧೯೯೩, ಗರೂಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ, ವೀರಶೈವ ಅಧ್ಯಯನಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ.

೩. ಮರುಳಸಿದ್ದಪ್ಪ ಕೆ., ೨೦೧೩, ಆಧುನಿಕ ಕನ್ನಡ ನಾಟಕ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

೪. ರಮಾಕಾಂತ ಜೋಶಿ., ಪ್ರಕಾಶ ಗರುಡ(ಸಂ.), ೨೦೧೧, ಗರುಡ ಸದಾಶಿವರಾಯರ ಸಮಗ್ರ ನಾಟಕ(ಸಂಪುಟ ೨), ಮನೋಹರ ಗ್ರಂಥಮಾಲಾ, ಧಾರವಾಡ.

೫. ರಂಗನಾಥ್ ಎಚ್.ಕೆ., ೨೦೦೦, ಕರ್ನಾಟಕ ರಂಗಭೂಮಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು,

೬. ರಾಮಕೃಷ್ಣ ಮರಾಠೆ., ೧೯೯೪, ಉತ್ತರ ಕರ್ನಾಟಕದ ವೃತ್ತಿರಂಗಭೂಮಿ, ಇಳಾ ಪ್ರಕಾಶನ, ಬೆಂಗಳೂರು

೭. ರಾಮಕೃಷ್ಣ ಮರಾಠೆ (ಸಂ), ಎಂ.ಎಂ.ಕಲಬುರ್ಗಿ (ಪ್ರ.ಸಂ)., ೧೯೯೪, ನಾಟ್ಯಭೂಷಣ, ಕರ್ನಾಟಕ ರಂಗಭೂಮಿ ಉತ್ತೇಜನ ಹಾಗೂ ಅಭಿವೃದ್ಧಿ ಸಹಕಾರಿ ಸಂಘ (ನಿ), ಬೆಳಗಾವಿ.